**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ26.09.2025 ರಂದು ಪ್ರಮಾಣೀಕರಿಸಲಾಯಿತು.</u>**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್ ಎನ್ ಎಸ್ ವಕೀಲರಿಂದಃ**

ನಿ ಪಿ 1 ಅನ್ನು ನಾನು ದಿಃ20.01.2021 ರಂದು ಬರೆದಿರುತ್ತೇನೆ. ಅದನ್ನು ಬರೆದಾಗ ಸಮಯ ಸುಮಾರು ಮಧ್ಯಾಹ್ನ 2.00 ಗಂಟೆ ಆಗಿರಬಹುದು. ನಿಪಿ 1 ಅನ್ನು ಬಸವೇಗೌಡರು ಕೊಟ್ಟ ರೂ.1 ಲಕ್ಷ ಹಣಕ್ಕೆ ಸಂಬಂಧಿಸಿದಂತೆ ಬರೆದಿರುತ್ತೇನೆ. ಸದರಿ ರೂ.1 ಲಕ್ಷವನ್ನು ರೂ.500 ಮುಖಬೆಲೆಯ 200 ನೋಟುಗಳಂತೆ ಕೊಟ್ಟಿರುತ್ತಾರೆ. ಆ ದಿನ ಬಸವಣ್ಣ, ಕೆ. ನಾರಾಯಣ, ಮಹದೇವಮ್ಮ ಸಾಕ್ಷಿದಾರರಾಗಿದ್ದರು ಹಾಗೂ ಸಾಲ ಪಡೆದವರಲ್ಲಿ ಸಣ್ಣಮ್ಮ ಮತ್ತು ಅವರ ಮಗ ಬಸವರಾಜು ಇದ್ದರು. ಬಸವೇಗೌಡ ಕೂಡಾ ಇದ್ದರು. ನಾನು ಹೇಳುವಂತೆ ದಿಃ20.01.2021 ರಂದು ನಿ ಪಿ 1 ರ ಪತ್ರವನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಮಹದೇವಮ್ಮನವರು ಬಸವರಾಜು ಅವರ ಹೆಂಡತಿ ಇರುತ್ತಾರೆ. ಸಾಕ್ಷಿಗೆ ಒಂದು ಆಧಾರ ಕಾರ್ಡನ ಜೆರಾಕ್ಸ್ ಪ್ರತಿಯನ್ನು ತೋರಿಸಿ ಅದು ಮಹದೇವಮ್ಮ ನವರದ್ದು ಎಂದು ಕೇಳಲಾಗಿ ಸಾಕ್ಷಿಯು ಸದರಿ ಪತ್ರ ಬರೆದು 4 ವರ್ಷಗಳು ಕಳೆದಿವೆ ಹಾಗಾಗಿ ನನಗೆ ಅವರನ್ನು ಗುರುತಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಆದಿನ ಯಾವುದೇ ಸಾಕ್ಷಿದಾರರು ಬರಲೇ ಇಲ್ಲ ವಾದಿಯೇ ಸದರಿ ಸಹಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿರುವ ಸಹಿಯನ್ನು ಮಹದೇವಮ್ಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಬಸವೇಗೌಡ ರವರು ಸಾಲ ಕೊಡುವಾಗ ಎರಡು ಖಾಲಿ ಛಾಪಾ ಕಾಗದಗಳಿಗೆ ಪ್ರತಿವಾದಿಗಳ ಸಹಿ ಪಡೆದು ಸದರಿ ಖಾಲಿ ಛಾಪಾ ಕಾಗದಗಳನ್ನು ದುರುಪಯೋಗಪಡಿಸಿಕೊಂಡು ವಾದಿ ನಿ ಪಿ 1 ಅನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸುಳ್ಳು.

ವಾದಿಯು ತನ್ನ ಮನೆಯಲ್ಲಿ ಪ್ರತಿವಾದಿಗಳಿಗೆ ರೂ.1 ಲಕ್ಷ ಹಣ ಕೊಟ್ಟು 2 ಖಾಲಿ ಛಾಪಾ ಕಾಗದಗಳಿಗೆ ಪ್ರತಿವಾದಿಗಳ ಸಹಿ ಪಡದುಕೊಂಡಿದ್ದರು ಎಂದರೆ ಸರಿಯಲ್ಲ. ದಾವಾ ಹೂಡುವ ಸಂದರ್ಭದಲ್ಲಿ ಒಂದು ಛಾಪಾ ಕಾಗದವನ್ನು ರೂ.1 ಲಕ್ಷಕ್ಕೆ ಮತ್ತೊಂದು ಛಾಪಾ ಕಾಗದವನ್ನು ರೂ.2 ಲಕ್ಷಕ್ಕೆ ಪ್ರೋನೋಟ್ ಗಳಂತೆ ತಯಾರಿಸಿ ನಂತರ ನಮ್ಮ ಸಹಿಗಳನ್ನು ಪಡೆದು ಈ ದಾವೆಯಲ್ಲಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಿ ಪಿ 1 ಅನ್ನು ನಾನು ಬರೆಯದಿದ್ದರೂ ಕೂಡಾ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ**